OS 87/2022

ಡಿ.ಡಬ್ಲ್ಯೂ೧ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 01-08-2025

ಪಾಟೀ ಸವಾಲು : ವಾದಿ ಪರಃ ಶ್ರೀ ಆರ್.ಎಮ್. ವಕೀಲರಿಂದಃ

ನಾನು ಹಿಂದೂ ಧರ್ಮದ ಕನ್ನಡ ಹೆಗ್ಡೆ ಜಾತಿಗೆ ಸೇರಿರುತ್ತೇನೆ. ನನ್ನ ಮನೆ ಅಜೆಕಾರಿನ ಬಲ್ಲಿಬೆಟ್ಟುವಿನಲ್ಲಿ ಇರುತ್ತದೆ ಎಂದರೆ ಅದು ನನ್ನ ದೊಡ್ಡಮ್ಮನ ಮನೆ. ವಾದಿಯ ಮನೆ ಮುಧ್ರಾಡಿಯಲ್ಲಿರುತ್ತದೆ. ನಿಪಿ-1 ವಿವಾಹ ಆಮಂತ್ರಣ ಪತ್ರಿಕೆಯಲ್ಲಿ ನನ್ನ ವಿಳಾಸ ಅಜೆಕಾರು ಬಲ್ಲಿಬೆಟ್ಟು ಎಂದು ಕಾಣಿಸಿರುತ್ತದೆ ಎಂದರೆ ಸರಿ. ನನ್ನ ಹಾಗೂ ವಾದಿಯ ಮನೆಗೆ 12 ಕಿ.ಮೀ ದೂರ ಇದೆ. ಹೆಗ್ಡೆ ಜಾತಿಗೆ ಸೇರಿದವರು ಕಡಿಮೆ ಜನ ಇದ್ದಾರೆ ಎಂದರೆ ಸರಿ. ಮದುವೆಯಾಗುವ ಪೂರ್ವದಲ್ಲಿ ನನಗೆ ವಾದಿಯ ಪರಿಚಯವಿರುವುದಿಲ್ಲ. ನಮ್ಮದು ಗುರುಹಿರಿಯರು ನೋಡಿ ನಿಶ್ಚಯಿಸಿದ ಮದುವೆಯಾಗಿತ್ತು. ಮದುವೆಯ ಮುನ್ನ ನಿಶ್ಚಿತಾರ್ಥವಾಗಿತ್ತು. ಮದುವೆಯ ಪೂರ್ವದಲ್ಲಿ ಹುಡುಗಿ ಹಾಗೂ ಅವರ ಮನೆತನದ ಬಗ್ಗೆ ವಿಚಾರಿಸಿರುತ್ತೇನೆ. ಮದುವೆ ಹಾಗೂ ನಿಶ್ಚಿತಾರ್ಥದ ನಡುವೆ ಸುಮಾರು 1 ವರ್ಷ ಅಂತರ ಇತ್ತು ಎಂದರೆ 6 ತಿಂಗಳು ಅಂತರ ಇತ್ತು. ಈ ಸಮಯದಲ್ಲಿ ಹುಡುಗಿಯ ಪೂರ್ವಾಪರ ತಿಳಿದುಕೊಳ್ಳಬಹುದಿತ್ತು. ನಮ್ಮ ಮದುವೆ ಎಣ್ಣೆಹೊಳೆ ಜಯರಾಮ ಭಟ್ ಸಭಾಭವನದಲ್ಲಿ ಆಗಿರುತ್ತದೆ.

ಮದುವೆಯಾದ ನಂತರ ವಾದಿಯನ್ನು ಅಜೆಕಾರಿನ ಬಲ್ಲಿಬೆಟ್ಟುವಿಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ 3 ದಿನ ಇದ್ದೆವು. ಅಜೆಕಾರಿನ ಬಲ್ಲಿಬೆಟ್ಟುವಿನ ಮನೆಯಲ್ಲಿ 7 ಜನ ವಾಸ ಇದ್ದೆವು. ಅಲ್ಲಿ ಕೃಷಿ, ಗದ್ದೆ ಜಾಗ ಹಾಗೂ ತೋಟ ಇದೆ. ಮದುವೆಯಾಗುವ ಸಂಧರ್ಭದಲ್ಲಿ ನಮ್ಮದು ಕೂಡು ಕುಟುಂಬವಾಗಿದ್ದು ಬಲ್ಲಿಬೆಟ್ಟುವಿನಲ್ಲಿ ವಾಸ ಇದ್ದೆವು. ಮದುವೆಯಾಗುವಾಗ ಮಂಗಳೂರಿನ ಬಾರ್ ಎಂಡ್ ರೆಸ್ಟೋರೆಂಟ್ ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೆನು ಹಾಗೂ ಮಂಗಳೂರಿನ ಬೋಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೆನು. ಅಲ್ಲಿಗೆ ನನ್ನ ಹೆಂಡತಿಯನ್ನು

ಕರೆದುಕೊಂಡು ಹೋಗಿರುತ್ತೇನೆ. ಬಾರ್ ಆಂಡ್ ರೆಸ್ಟೋರೆಂಟಿನ ಸಮಯ ಬೆಳ್ಳಿಗ್ಗೆ 11.0 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ ಇದ್ದು, ಮಧ್ಯಾಹ್ನ 3.00 ರಿಂದ 7.00 ಗಂಟೆಯವರೆಗೆ ಬಿಡುವಿನ ಸಮಯವಾಗಿತ್ತು. ಕೆಲಸ ಮುಗಿಸಿ ಮನೆಗೆ ಬರುವಾಗ ರಾತ್ರಿ 11.45 ಗಂಟೆಯಾಗುತ್ತಿತ್ತು. ಅಲ್ಲಿಯವರೆಗೆ ವಾದಿ ಮನೆಯಲ್ಲಿ ಒಬ್ಬರೇ ಇರುತ್ತಿದ್ದರು.

ಬೋಳೂರಿನ ಮನೆಯ ಪಕ್ಕದಲ್ಲಿ ಶರ್ಮಿಳಾ ಎಂಬುವವರ ಮನೆ ಇತ್ತು ಎಂದರೆ ಗೊತ್ತಿಲ್ಲ. ಬೋಳೂರಿನ ಮನೆಯಲ್ಲಿರುವಾಗ ವಾದಿಯು ಗರ್ಭಿಣಿಯಾಗಿರುತ್ತಾರೆ. ಗರ್ಭಿಣಿಯಾಗಿರುವಾಗ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಬೇಕು ಎಂದು ಗೊತ್ತಿರುತ್ತದೆ. ತಪಾಸಣೆ ಮಾಡಿಸಿದ ಬಗ್ಗೆ ವಾದಿಯ ಬಳಿ ದಾಖಲೆ ಇರುತ್ತದೆ. ನನ್ನ ಬಳಿ ಇರುವುದಿಲ್ಲ. ವಾದಿಗಿಂತ ಹೆಚ್ಚಾಗಿ ನನಗೆ ಮಂಗಳೂರಿನಲ್ಲಿ ಎಲ್ಲಿ ಆಸ್ಪತ್ರೆಗಳಿವೆ ಎಂದು ಗೊತ್ತಿರುತ್ತದೆ. ವಾದಿ ಗರ್ಭಿಣಿಯಾಗಿರುವಾಗ ಆಕೆಗೆ ಏನೂ ಸಮಸ್ತೆ ಇರಲಿಲ್ಲ. ಆಕೆಗೆ ವಿಪರೀತ ವಾಂತಿ ಆಗುತ್ತಿತ್ತು ಎಂದರೆ ಸರಿಯಲ್ಲ. ವಾದಿಯನ್ನು ಆ ಸಮಯದಲ್ಲಿ ಶರ್ಮಿಳಾ ರವರು ಆಸ್ಪತ್ರೆಗೆ ತಪಾಸಣೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಸಂಪ್ರದಾಯದ ಪ್ರಕಾರ ಸೀಮಂತ ಆಗಬೇಕು ಎಂದರೆ ಸರಿ. ವಾದಿಯ ಸೀಮಂತ ಅಜೆಕಾರಿನ ಚರ್ಚ್ ಹಾಲ್ ನಲ್ಲಿ ಆಗಿರುತ್ತದೆ. ಸದ್ರಿ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ಭರಿಸಿದ ಬಗ್ಗೆ ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಇಲ್ಲ. ಚರ್ಚ್ ಹಾಲ್ ಈಗಲೂ ಇದೆ. ಅಲ್ಲಿ ಹೋಗಿ ಕೇಳಿದರೆ ದಾಖಲೆ ನೀಡಬಹುದು ಎಂದರೆ ಇರಬಹುದು.

ವಾದಿಯ ಹೆರಿಗೆ ಉಡುಪಿಯ ಆಸ್ಪತ್ರೆಯಲ್ಲಿ ಆಗಿರುತ್ತದೆ. ಸಿಸೇರಿಯನ್ ಆಗಿರುತ್ತದೆ. ಹೆರಿಗೆ ಸಮಯ ವಾದಿಯನ್ನು ಆಸ್ಪತ್ರೆಗೆ ಆಕೆಯ ತಾಯಿ ಹಾಗೂ ಚಿಕ್ಕಮ್ಮ ದಾಖಲಿಸಿರುತ್ತಾರೆ. ನಾನು ಮಂಗಳೂರಿನಲ್ಲಿದ್ದು ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ವಾದಿಗೆ ಹೆರಿಗೆ ನೋವು ಬರುವ ಸಮಯದಲ್ಲಿ ನನಗೆ ಕರೆ ಮಾಡಿದರೂ ನಾನು ಹೋಗದ ಕಾರಣ ಆಕೆಯ ತಾಯಿ ಹಾಗೂ ಚಿಕ್ಕಮ್ಮ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಹೆರಿಗೆ ಆದ ನಂತರ ಅವರನ್ನು ಆರೈಕೆ ಮಾಡಿರುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

ನಮ್ಮ ಮಗು ಹುಟ್ಟುವಾಗ ಸರಿ ಇದ್ದು, 6 ವರ್ಷಗಳ ನಂತರ ಆರೋಗ್ಯ ಸಮಸ್ಯೆ ಕಾಣಿಸಿರುತ್ತದೆ. ಮಗುವಿನ ಎಡ ಮಿದುಳಿನಲ್ಲಿ ತೊಂದರೆ ಇದೆ ಎಂದರೆ ಸರಿ. ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದ ದಾಖಲೆಗಳಿಗೆ ನನ್ನ ತಕರಾರು ಇರುವುದಿಲ್ಲ. ಮುಂದುವರಿದು ನಾನೇ ನೋಡಿಕೊಂಡಿರುತ್ತೇನೆ. ಮಗುವಿನ ಚಿಕಿತ್ಸೆಗಾಗಿ ಖರ್ಚು ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳಿರುವುದಿಲ್ಲ. ವಾದಿಯ ಬಳಿ ಇರುತ್ತದೆ. ಅದಕ್ಕಾಗಿ ಹಣ ನಾನು ನೀಡುತ್ತಿದ್ದೆ. ನನ್ನ ಪ್ರಕಾರ ಮಗುವಿನ ಆರೋಗ್ಯಕ್ಕೆ ಮಾಸಿಕ ರೂ.1,000/- ಖರ್ಚು ಬರುತ್ತದೆ. ನನಗೆ ಮಾಹಿತಿ ಇಲ್ಲದ ಕಾರಣ ಆ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಗುವಿನ ಮಿದುಳಿಗೆ ಸಂಬಂಧಿಸಿದ ತೊಂದರೆ ಆತನಿಗೆ 13 ವರ್ಷ ಪ್ರಾಯವಾದಾಗ ಸರಿ ಆಗುತ್ತದೆ ಎಂದು  ವೈದ್ಯರು ಹೇಳಿರುತ್ತಾರೆ. ಮಗುವಿಗೆ ಈಗಲೂ ಚಿಕಿತ್ಸೆ ಕೊಡಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಮಗುವಿಗೆ 15-16 ವರ್ಷ ತುಂಬುವ ಒಳಗೆ ಆರೋಗ್ಯ ಸರಿ ಹೋಗದಿದ್ದರೆ ಅದು ಶಾಶ್ವತ ವಾಗಿರುತ್ತದೆ ಎಂದು ವೈದ್ಯರು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಗುವಿನ ವೈದ್ಯಕೀಯ ವೆಚ್ಚವನ್ನು ವಾದಿಯೇ ಭರಿಸುತ್ತಿದ್ದಾರೆ ಎಂದರೆ 2024 ರವರೆಗೆ ನಾನು ನೀಡಿರುತ್ತೇನೆ. ಆ ಬಗ್ಗೆ ದಾಖಲೆ ಇಲ್ಲ ನಗದಾಗಿ ನೀಡಿರುತ್ತೇನೆ. ನಾನು ಹೇಳಿರುವ ರೂ.1,000/- ವೈದ್ಯಕೀಯ ಖರ್ಚು ಮಾತ್ರೆಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಇದಲ್ಲದೆ ವೈದ್ಯರ ಶುಲ್ಕ, ಸ್ಕ್ಯಾನಿಂಗ್ ಶುಲ್ಕ ಮತ್ತು ಹೆಚ್ಚುವರಿ ಚಿಕಿತ್ಸೆಯ ಶುಲ್ಕ ಇರುತ್ತದೆ ಎಂದರೆ ಈಗ ಇರುವುದಿಲ್ಲ. ನನಗೆ ಮಗುವಿನ ಮೇಲೆ ಪ್ರೀತಿ ಇಲ್ಲದ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ವರ್ಷಗಳ ಹಿಂದೆ ನನ್ನ ಹಾಗೂ ವಾದಿಯ ನಡುವೆ ಪ್ರಥಮ ಬಾರಿಗೆ ಮನಸ್ತಾಪ ಉಂಟಾಗಿರುತ್ತದೆ. ವಾದಿಯು ಮೊಬೈಲ್ ನಲ್ಲಿ ಮಾತನಾಡಿದರೆ ನಿಮಗೆ ಸಂಶಯ ಎಂದರೆ ಸಾಕ್ಷಿ ವಾದಿಯು ಯಾವಾಗಲೂ ಮೊಬೈಲ್ ನಲ್ಲಿಯೇ ಬ್ಯುಸಿ ಇರುತ್ತಾರೆ ಹಾಗೂ ನನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ವಾದಿ ಮೊಬೈಲ್ ನಲ್ಲಿ ಮಾತನಾಡುತ್ತಿದ್ದಾಗ ನನಗೆ ನೋಡಲು ಮೊಬೈಲ್ ಕೊಡುತ್ತಿರಲಿಲ್ಲ ಎಂದು ನಾನು ಹೇಳಿರುವುದಿಲ್ಲ. ವಾದಿಯು ಮೊಬೈಲ್ ನಲ್ಲಿ  ಚಾಟಿಂಗ್ ಮಾಡುವಾಗ ಅದರ ಬಗ್ಗೆ ನನಗೆ ಸಂಶಯ ಇತ್ತು. ವಾದಿಯವರು ಬೇರೆ ಪುರುಷ ರೊಂದಿಗೆ ಮಾತನಾಡುತ್ತಿದ್ದರು

ಎಂದು ಸಂಶಯ ಇತ್ತು. ಆ ಕಾರಣಕ್ಕಾಗಿ ಅವರ ಮೊಬೈಲ್ ಕಿತ್ತುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸಂಶಯದ ಕಾರಣದಿಂದಾಗಿ ನಮ್ಮ ನಡುವೆ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಕಾಳಜಿ ಮಾಡುತ್ತಿಲ್ಲ ಎಂಬ ಕಾರಣಕ್ಕಾಗಿ ನಮ್ಮ ನಡುವೆ ವೈಮನಸ್ಸು ಉಂಟಾಗಿರುತ್ತದೆ. ಈ ಬಗ್ಗೆ ವಾದಿಯ ಹಿರಿಯರ ಬಳಿ ಹೇಳಿ ರಾಜಿ ಮಾಡಲು ಪ್ರಯತ್ನಿಸಿರುತ್ತೀರಾ ಎಂದರೆ ನನ್ನ ಅಣ್ಣ ಮಾಡಿರುತ್ತಾರೆ. ಆ ಬಗ್ಗೆ ನನ್ನ ಅಣ್ಣನನ್ನು ವಿಚಾರಣೆ ಮಾಡಬಹುದು.

ನನ್ನ ಹಾಗೂ ವಾದಿಯ ನಡುವಿನ ಮನಸ್ತಾಪದ ಬಗ್ಗೆ ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ಮಾತುಕತೆ ಆಗಿರುತ್ತದೆ. ಅಲ್ಲಿ ವಾದಿ ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಹಾಗೂ ನನ್ನನ್ನು ಕಡೆಗಣಿಸುತ್ತಿದ್ದಾರೆ ಎಂದು ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಇಲ್ಲ. ವಾದಿ ಮೊಬೈಲ್ ಬಳಸುವ ಬಗ್ಗೆ ಹೇಳಿರುತ್ತೇನೆ. ಮೊಬೈಲ್ ಬಳಸಿ ವಾದಿ ಮೂರನೇ ವ್ಯಕ್ತಿಗಳೊಂದಿಗೆ ಮಾತನಾಡುತ್ತಾರೆ ಎಂದು ಹೇಳಿರುತ್ತೇನೆ. ನನ್ನ ಹಾಗೂ ವಾದಿಯ ನಡುವಿನ ಮನಸ್ತಾಪಕ್ಕೆ ಮುಖ್ಯ ಕಾರಣ ನನ್ನ ಸಂಶಯ ಪ್ರವೃತ್ತಿ ಎಂದರೆ ಸರಿಯಲ್ಲ. ವಾದಿ ತನ್ನ ಸ್ನೇಹಿತರು, ಸಂಬಂಧಿಕರು ಹಾಗೂ ಮನೆಯವರ ಜೊತೆ ಮಾತನಾಡಿದರೂ ನಾನು ಸಂಶಯ ಹೊಂದಿ ಆಕೆಯ ಮೊಬೈಲ್ ಪರಿಶೀಲಿಸುತ್ತಿದ್ದೆ ಎಂದರೆ ಸರಿಯಲ್ಲ.

ನನಗೆ ಮಧ್ಯ ಸೇವನೆ ಮಾಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ನಾನು ನನ್ನ ಮಗುವಿನ ಮುಂದೆ ಕೂಡಾ ಮನೆಯಲ್ಲಿ ಮಧ್ಯ ಸೇವನೆ ಮಾಡುತ್ತಿದ್ದೆ, ಆ ರೀತಿ ಮಾಡಬಾರದು ಎಂದು ವಾದಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ನನಗೆ ಮಧ್ಯಪಾನ ಮಾಡುವ ಅಭ್ಯಾಸ ಇದೆ ಎಂದು ವಾದಿಯು ಹೇಳಿರುವುದಿಲ್ಲ. ನಿಪಿ-22 ವಾದಿ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ನೀಡಿದ ದೂರು ಅರ್ಜಿ ಎಂದರೆ ಸರಿ. ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ಕೌಟುಂಬಿಕ ಸಲಹಾಗಾರರು ನನ್ನನ್ನು ಕರೆದು ಮಗುವನ್ನು ಚೆನ್ನಾಗಿ ಕೊಳ್ಳಬೇಕು ಎಂದು ಹೇಳಿ ಪ್ರಕರಣ ಮುಕ್ತಾಯಗೊಳಿಸಿರುತ್ತಾರೆ. 2022 ಜನವರಿ ತಿಂಗಳಲ್ಲಿ ನನ್ನ ವಿರುದ್ಧ ವಾದಿ ಹೆಬ್ರಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಷದ್ರಿ ದೂರಿನಲ್ಲಿ ನಾನು ಹಾಗೂ ವಾದಿಯ ಚಿಕ್ಕಪ್ಪ ರವೀಂದ್ರ ಹೆಗ್ಡೆ ವಾದಿಗೆ ಹೊಡೆಯುತ್ತೇವೆ ಹಾಗೂ ಹಿಂಸೆ

ಕೊಡುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಹೆಬ್ರಿ ಠಾಣೆಯಲ್ಲಿ ವಾದಿ ಹಾಗೂ ನನ್ನನ್ನು ಕರೆದು ವಿಚಾರಣೆ ಮಾಡಿರುತ್ತಾರೆ. ಕೌಟುಂಬಿಕ ವಿಚಾರ ಎಂದು ಹೇಳಿ ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ಬಗೆಹರಿಸಿಕೊಳ್ಳಲು ತಿಳಿಸಿರುತ್ತಾರೆ. ಆ ನಂತರ ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ವಿಚಾರಣೆ ಆಗಿರುತ್ತದೆ. ವಾದಿ ಹೆಬ್ರಿ ಠಾಣೆಗೆ ದೂರನ್ನು ನೀಡುವ ರಾತ್ರಿ ನಾನು ಹಾಗೂ ರವೀಂದ್ರ ಹೆಗ್ಡೆ ಮಧ್ಯಸೇವನೆ ಮಾಡಿ ವಾದಿಗೆ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ರವೀಂದ್ರ ಹೆಗ್ಡೆಯವರಿಗೆ ಮಧ್ಯ ಸೇವಿಸುವ ಅಭ್ಯಾಸ ಇರುವ ಬಗ್ಗೆ ನನಗೆ ಗೊತ್ತಿಲ್ಲ. ರವೀಂದ್ರ ಹೆಗ್ಡೆಯವರ ಮನೆ ವಾದಿ ಮನೆಯ ಬದಿಯಲ್ಲಿದೆ ಎಂದರೆ ಗೊತ್ತಿಲ್ಲ. ನನ್ನ ಹಾಗೂ ವಾದಿಯ ಸಂಬಂಧ ಸರಿಪಡಿಸಲಾಗದಷ್ಟು ಹಳಸಿ ಹೋಗಿರುತ್ತದೆ ಎಂದರೆ ಸಾಕ್ಷಿ ಆಕೆ ಬಂದರೆ ನಾನು ನೋಡಿಕೊಳ್ಳುತ್ತೇನೆ. ವಾದಿಯನ್ನು ಮನೆಗೆ ವಾಪಸ್ಸು ಬಂದು ಒಟ್ಟಾಗಿ ಇರುವ ಎಂದು ನೋಟೀಸು ನೀಡಿದ್ದಾಗಲಿ, ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಿದ್ದಾಗಲೀ ಮಾಡಿರುವುದಿಲ್ಲ.

ನಿಪಿ-11 ನಮ್ಮ ಕುಟುಂಬದ ನಡುವೆ ಆದ ಪಾಲು ವ್ಯಾಜ್ಯದ ಅಂತಿಮ ಡಿಕ್ರಿಯಾಗಿರುತ್ತದೆ. ಅದರಲ್ಲಿ ಕಾಣಿಸಿದ 10 ನೇ ಪಕ್ಷಗಾರ ನಾನಾಗಿರುತ್ತೇನೆ. ಮರ್ಣೆ ಗ್ರಾಮದ ಸರ್ವೆ ನಂಬರ್ 150/2 ಪಿ2, 150/9 ಪಿ1, 400/5 ಪಿ3 ನನಗೆ ವಿಂಗಡಿಸಿದ ಆಸ್ತಿಗಳು ಎಂದರೆ ಸರಿ. ಇವುಗಳ ಪಹಣಿ ಪತ್ರಿಕೆ ಆಗಿರುತ್ತದೆ. ಕಡ್ತಲ ಗ್ರಾಮದಲ್ಲಿರುವ ಆಸ್ತಿ ಓ.ಎಸ್. ನಂಬ್ರ 39/2017 ರ ಪ್ರಕಾರ ನನ್ನ ಹಾಗೂ ನನ್ನ ಅಣ್ಣನ ಜಂಟಿ ಹಕ್ಕಿಗೆ ವಿಭಾಗವಾಗಿರುತ್ತದೆ. ಅದರಲ್ಲಿ ಅರ್ಧ ಭಾಗ ನನಗೆ ಬರುತ್ತದೆ. ಈ ದಾವೆಯನ್ನು ದಾಖಲಿಸದಿದ್ದರೆ ನಾನು ನನ್ನ ಹಕ್ಕಿನ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದರಿಂದ ನಾನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮದು ಹೆಗ್ಡೆ ಸಮುದಾಯದಲ್ಲಿರುವ ಒಳ್ಳೆಯ ಕುಟುಂಬವಾಗಿರುತ್ತದೆ. ನಮ್ಮ ಕುಟುಂಬಕ್ಕೆ ಮರ್ಣೆ ಹಾಗೂ ಕಡ್ತಲ ಗ್ರಾಮದಲ್ಲಿ ಆಸ್ತಿಗಳು ಇದ್ದವು.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ